ನವಸಾಕ್ಷರ ಪುಸ್ತಕ ಮಾಲೆ ೧೧೦

ಲೀಲಾ ಟಿ.ವಿ. ಕೊಂಡಳು

ವಿ. ಕೆ. ಆಶಾ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು

ಡಾ. ಚಂದ್ರಶೇಖರ ಕಂಬಾರ

ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ

ಹಾ. ಮಾ. ನಾಯಕ

ಎಚ್. ನರಸಿಂಹಯ್ಯ

ಜಿ. ನಾರಾಯಣ

ಎಲ್. ಎಸ್. ಶೇಷಗಿರಿರಾವ್

ಶಾಂತರಸ

ಕೆ. ವಿ. ಸುಬ್ಬಣ್ಣ

ಗೊ. ರು. ಚನ್ನಬಸಪ್ಪ

ಪಿ. ಎಸ್. ಶಂಕರ್

ಶಿವಶಂಕರ ಹಿರೇಮಠ

ಆರ್. ಎಸ್. ರಾಜಾರಾಮ್

ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ

ಎಸ್. ಜಿ. ನಾಗಲೋಟಿಮಠ

ಕೆ. ವಿ. ನಾರಾಯಣ

ಪುರುಷೋತ್ತಮ ಬಿಳಿಮಲೆ

ಕರೀಗೌಡ ಬೀಚನಹಳ್ಳಿ

ಅಮೃತ ಸೋಮೇಶ್ವರ

ಸಿ. ಆರ್. ಚಂದ್ರಶೇಖರ್

ಬಿ. ಎ. ಶ್ರೀಧರ

ಲಿಂಗದೇವರು ಹಳೆಮನೆ

ಭ. ಮಲ್ಲಿಕಾರ್ಜುನ

ಮಹಾಬಲೇಶ್ವರರಾವ್

ಭಕ್ತಪ್ರಿಯ

ಎಂ. ಪಿ. ಪರಮಶೇಖರಯ್ಯ

ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ–೧೧೦

ಲೀಲಾ ಟಿ.ವಿ. ಕೊಂಡಳು

ವಿ. ಕೆ. ಆಶಾ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೧೧

LEELA T.V. KONDALU : By V. K. ASHA. Published by The Director of Prasaranga,
Kannada University, Hampi - 583 211, KARNATAKA.
First Impression 1994, Pp. ii + 26, Rs. 8.00


ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ಮೊದಲನೆ ಮುಖ್ಯರಸ್ತೆ,
ಹೊಸ ತರಗುಪೇಟೆ, ಬೆಂಗಳೂರು-೫೬೦ ೦೦೨.



ಲೀಲಾ ಟಿ.ವಿ. ಕೊಂಡಳು

ಲೀಲಾಳ ಮಕ್ಕಳದ್ದು ಒಂದೇ ಹಟ! ಮನೆಗೆ ಒಂದು ಟಿ.ವಿ. ಕೊಂಡು ತರಬೇಕೆಂದು. ಆದರೆ, ಟಿ.ವಿ.ಯೇನು ಆಟದ ಸಾಮಾನೇ, ಬಯಸಿದ ಕೂಡಲೇ ತಂದುಬಿಡಲು. ಏಳೆಂಟು ಮನೆಯ ಮುಸುರೆ ತಿಕ್ಕಿದರೆಷ್ಟೇ, ಹೇಗೋ ಜೀವನ ಸಾಗುತ್ತಿತ್ತು. ಇನ್ನು ಟಿ.ವಿಯನ್ನು ಹೇಗೆ ಕೊಂಡುತರುತ್ತಾಳೆ?! ಇದೆಲ್ಲ ಮಕ್ಕಳಿಗೇನು ಗೊತ್ತು, ತಾಯಿ ತಂದದ್ದು, ತಿಂದರಾಯಿತು! ಟಿ.ವಿ. ಬೇಕೆಂಬ ಆಸೆ ಮಕ್ಕಳದಷ್ಟೇ ಆಗಿದ್ದರೆ ಲೀಲಾ ಹೇಗೋ ಅದನ್ನು ನಿಭಾಯಿಸುತ್ತಿದ್ದಳು. ಆದರೆ, ಅವಳಿಗೇ ತನ್ನ ಮನೆಗೊಂದು ಟಿ.ವಿ. ಬೇಕೆಂಬ ಆಸೆ ಒಳಗೊಳಗೇ ಇತ್ತಲ್ಲ. ಮಕ್ಕಳ ಹಟ, ಅವಳನ್ನು ಮತ್ತೆ ಮತ್ತೆ ಆ ಬಗ್ಗೆ ಯೋಚಿಸುವಂತೆ ಮಾಡಿತು.

ಅವಳು ಯಾವಾಗಲೂ ಇಂತಹ ಪೇಚಾಟಕ್ಕೆ ಸಿಕ್ಕಿಕೊಂಡಾಗ ಓಡುತ್ತಿದ್ದುದು ಕಮಲಮ್ಮನವರಲ್ಲಿಗೆ. ಅವರೋ, ಲೀಲಾಳನ್ನು ತುಂಬಾ ವಿಶ್ವಾಸದಿಂದ ಕಾಣುತ್ತಿದ್ದರು. ಆದರೂ, ಲೀಲಾಳಿಗೆ ಸಂಕೋಚ, ಟಿ.ವಿಯಂತಹ



ಲೀಲಾ ತನ್ನ ಆಸೆಯನ್ನು ಕಮಲಮ್ಮನವರಿಗೆ ತಿಳಿಸಿದಳು


ವಸ್ತುಗಳು ತನ್ನಂತವರಿಗಾಗಿಯೇ? "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ" ಎಂದ ಹಾಗೆ! ಆದರೆ ಅವಳ ಮನಸ್ಸು ತಡೆಯಲಿಲ್ಲ. ಕಮಲಮ್ಮನವರಲ್ಲಿಗೆ ತನ್ನ ಸಮಸ್ಯೆಯನ್ನು ತೆಗೆದುಕೊಂಡು ಬಂದೇ ಬಿಟ್ಟಳು.

ಕಮಲಮ್ಮನವರೂ ಯೋಚಿಸಿದರು? ಆಸೆ ಯಾರಿಗೆ ತಾನೇ ಇರುವುದಿಲ್ಲ? ಅದೂ ಇಂದಿನ ದಿನಗಳಲ್ಲಿ ಎಲ್ಲರ ಮನೆಯಲ್ಲೂ ಟಿ.ವಿ. ಇರುತ್ತದೆ. ಲೀಲಳೂ ನಾಲ್ಕಾರು ಮನೆಯಲ್ಲಿ ದುಡಿಯುತ್ತಾಳೆ. ಸ್ವಲ್ಪ ಸ್ವಲ್ಪವೇ ಹಣ ಕೂಡಿಟ್ಟರೆ, ಕೆಲವು ದಿನಗಳಲ್ಲಿ ಅವಳೂ ಒಂದು ಟಿ.ವಿಯನ್ನು ಕೊಳ್ಳಬಹುದು. ಹಾಗೆಯೇ ಲೀಲಳಿಗೂ ಹೇಳಿದರು "ನೋಡು ಲೀಲಾ, ನೀನು ಗಳಿಸುತ್ತಿರುವುದನ್ನೆಲ್ಲ ಖರ್ಚು ಮಾಡಿಬಿಡಬೇಡ. ಸಾಧ್ಯವಾದಷ್ಟು ಅದರಲ್ಲೇ ಉಳಿಸು ಬ್ಯಾಂಕಿನಲ್ಲಿ ಒಂದು ಖಾತೆ ತೆರೆ, ಅದರಲ್ಲಿ ಪ್ರತಿ ತಿಂಗಳೂ ನಿನ್ನಿಂದ ಸಾಧ್ಯವಾದಷ್ಟು ಹಣ ಜಮಾ ಮಾಡು. ಬ್ಯಾಂಕಿನವರು ಬಡ್ಡಿಯನ್ನು ಕೊಡುತ್ತಾರೆ. ಟಿ.ವಿಗೆ ಬೇಕಾಗುವಷ್ಟು ಹಣ ಕೂಡಿದ ಮೇಲೆ ಒಂದು ಸಣ್ಣ ಟಿ.ವಿ ಕೊಳ್ಳುವಿಯಂತೆ. ಅದೇನೂ ದೊಡ್ಡ ವಿಷಯವಲ್ಲ ಬಿಡು."

ಲೀಲಳಿಗೆ ಅವರ ಮಾತು ಕೇಳಿ ತುಂಬಾ ಖುಷಿಯಾಯಿತು. ಅವಳು "ಅಮ್ಮಾ, ನನಗೆ ಬ್ಯಾಂಕ್ ಎಲ್ಲ ಏನೂ ಗೊತ್ತಿಲ್ಲ. ನನಗೆ ನೀವೇ ಬ್ಯಾಂಕ್! ನಾ ನಿಮ್ಮೊಡನೆ ಹಣ ಜಮಾ ಮಾಡುತ್ತೇನೆ" ಎಂದಳು.

ಸರಿ ಎಂದು ಕಮಲಮ್ಮನವರು, ತಾವೇ ಒಂದು ದಿನ ಬ್ಯಾಂಕಿಗೆ ಹೋಗಿ, ಲೀಲಳ ಹೆಸರಿನಲ್ಲಿ ಒಂದು ಖಾತೆಯನ್ನು ತೆರೆದು, ಅದರಲ್ಲಿ ಅವಳು ತಂದುಕೊಟ್ಟ ಹಣ ಜಮಾ ಮಾಡಲು ತೊಡಗಿದರು.

❖ ❖ ❖



ಲೀಲಾಳ ಮನೆಗೆ ಟಿ.ವಿ. ಬಂತು

ಲೀಲಾ ತಿಂಗಳು ತಿಂಗಳೂ, ಹತ್ತು, ಇಪ್ಪತ್ತು ರೂಪಾಯಿಗಳನ್ನು ಕಮಲಮ್ಮನ ಬಳಿ ಜಮಾ ಮಾಡುವಂತೆ ಕೊಡುತ್ತಿದ್ದಳು. ಆದರೆ, ಅವಳ ಈ ಹತ್ತು, ಇಪ್ಪತ್ತು ರೂಪಾಯಿ 'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ'ಯಂತೆ ಅವಳ ಟಿ.ವಿ. ಬೆಲೆ ತುಂಬೀತೇ?! ಕಮಲಮ್ಮನವರು ಯೋಚಿಸಿದರು "ಈ ರೀತಿಯಲ್ಲಿ ಲೀಲ ಹಣ ಕೂಡಿಟ್ಟರೆ, ಈ ಜನ್ಮದಲ್ಲಿ ಅವಳು ಟಿ.ವಿ. ಖರೀದಿಸಿದ ಹಾಗೆಯೇ ಇದೆ. ಇದಕ್ಕೆ ಬೇರೆ ಏನಾದರೂ ದಾರಿ ಹುಡುಕಬೇಕು" ಅವರಿಗೆ ಲೀಲಳ ಮೇಲೆ ಕರುಣೆ ಮೂಡಿತು. ಪಾಪ, ಆಸೆ ಇಟ್ಟುಕೊಂಡಿದ್ದಾಳೆ. ಅವರು ಲೀಲಳ ಹಣಕ್ಕೆ ತಮ್ಮಲ್ಲಿದ್ದ ಹಣ ಸೇರಿಸಿ ಲೀಲಳಿಗೆ ಒಂದು ಸಣ್ಣ ಟಿ.ವಿ.ಯನ್ನು ಕೊಂಡುಕೊಟ್ಟರು. ಲೀಲ ಪ್ರತಿ ತಿಂಗಳೂ ಹಣ ಉಳಿಸಿ, ಅವರ ಟಿ.ವಿ.ಯ ಸಾಲವನ್ನು ತೀರಿಸುತ್ತೇನೆಂದು ಹೇಳಿದಳು.

ಟಿ.ವಿ. ಬಂದಮೇಲೆ ಲೀಲಾಳ ಸಂಭ್ರಮ ಕೇಳಬೇಕೆ!? ಮಕ್ಕಳೂ ಖುಶಿಯಿಂದ ಹುಚ್ಚರಾಗಿದ್ದರು. ಲೀಲಳಿಗೆ ಅದು ನಿಜವೋ ಕನಸೋ ಎಂದು ಒಮ್ಮೊಮ್ಮೆ ಸಂಶಯ ಬರುತ್ತಿತ್ತು. ಅವಳು ಟಿ.ವಿಗೆ ಹೂ, ಕುಂಕುಮ ಇಟ್ಟು ಪೂಜೆ ಮಾಡಿದಳು. ಟಿ.ವಿ.ಯನ್ನು ಹಚ್ಚಿಕೊಂಡು ಮನದಣಿಯುವಷ್ಟು ನೋಡಿ, ಎಲ್ಲರೂ ಆ ದಿನ ತೃಪ್ತಿಯಿಂದ ನಿದ್ದೆ ಮಾಡಿದರು.

✣ ✣ ✣

ಲೀಲಳ ಉತ್ಸಾಹ ಇಮ್ಮಡಿಯಾಗಿತ್ತು. ಅವಳು ಖುಷಿಯಿಂದ ಕೆಲಸ ಮಾಡತೊಡಗಿದಳು. ಮತ್ತೂ ಎರಡು ಮನೆ ಹೆಚ್ಚಿಗೆ ಹಿಡಿದಳು, ಕೆಲಸಕ್ಕೆ! ಟಿ.ವಿ. ಸಾಲವೊಂದು ತೀರಬೇಕಲ್ಲ!



ಹೊಸ ಟಿ.ವಿ. ಕೆಟ್ಟು ಹೋಗಿರುವುದಾಗಿ ಅಂಗಡಿಯವನಿಗೆ ತಿಳಿಸಿದಳು

ಅವಳ ಮೊದಲ ಕೆಲಸದ ಮನೆ ಕಮಲಮ್ಮನವರದು. ಲೀಲ ಅವರ ಮನೆಗೆ ಹೋಗಿ ಕೆಲಸಕ್ಕೆ ತೊಡಗುತ್ತಿದ್ದಂತೆ, ಕಮಲಮ್ಮನವರು "ನೋಡು ಲೀಲ! ಟಿ.ವಿಯ ಅಂಗಡಿಯವ, ಟಿ.ವಿಯ "ಗ್ಯಾರಂಟಿ ಕಾರ್ಡ್" ಕೊಟ್ಟಿದ್ದಾನೆ. ಇದನ್ನು ಜೋಪಾನವಾಗಿರಿಕೋ" ಎನ್ನುತ್ತಾ ಒಂದು ಕಾರ್ಡನ್ನು ಕೊಟ್ಟರು. ಲೀಲಳಿಗೆ ಅದೇನೆಂದು ತಿಳಿಯಲಿಲ್ಲ. ಅದೇನೆಂದು ಅವಳು ಕೇಳಲು ಅವರೆಂದರು "ಗ್ಯಾರಂಟಿ ಕಾರ್ಡ್" ಎಂದರೆ, ಒಂದು ರೀತಿಯ ಜವಾಬ್ದಾರಿಯಾಗಿರುತ್ತದೆ. ಮಾಲು ಕೊಟ್ಟವರು ಇಷ್ಟು ಸಮಯದವರೆಗೆ ಆ ಮಾಲು ಕೆಟ್ಟುಹೋಗದು, ಅಕಸ್ಮಾತ್ ಕೆಟ್ಟು ಹೋದರೆ, ಅದಕ್ಕೆ ತಾವು ಜವಾಬ್ದಾರರು ಎಂದು ಆ ಕಾರ್ಡಿನಲ್ಲಿ ಬರೆದು ಕೊಡುತ್ತಾರೆ. ಹಾಗಾಗಿ ಇದನ್ನು ಜೋಪಾನವಾಗಿಡು. ಅಕಸ್ಮಾತ್ ಟಿ.ವಿ ಕೆಟ್ಟರೆ, ಈ ಕಾರ್ಡನ್ನು ತೋರಿಸಿದರೆ, ಅಂಗಡಿಯವರೇ ಬಂದು ರಿಪೇರಿ ಮಾಡಿ ಕೊಡುತ್ತಾರೆ, ಪುಕ್ಕಟೆಯಾಗಿ!" ಲೀಲಾ ಅವರ ಮನೆಯ ಕೆಲಸ ಮುಗಿಸಿದವಳೇ, ತನ್ನ ಮನೆಗೆ ಹೋಗಿ, 'ಗ್ಯಾರಂಟಿ ಕಾರ್ಡನ್ನು' ಒಂದು ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿದಳು.

✣ ✣ ✣

ಲೀಲಾ ಮನೆಗೆ ಟಿ.ವಿ. ಬಂದು ತಿಂಗಳಾಗುತ್ತ ಬಂತು. ಮನೆಯವರಿಗೆಲ್ಲ ಟಿ.ವಿ ಇನ್ನೂ ಹೊಸತಾಗಿಯೇ ಇತ್ತು. ಆದರೆ ಒಂದು ದಿನ ಟಿ.ವಿ. ನೋಡುನೋಡುತ್ತಿರುವಂತೆಯೇ ನಿಂತು ಹೋಯಿತು. ಮನೆಯಲ್ಲಿ ಎಲ್ಲರಿಗೂ ತುಂಬಾ ಗಾಬರಿಯಾಯಿತು! ಎಲ್ಲರೂ ಸೇರಿ ಏನೆಲ್ಲಾ ಪ್ರಯತ್ನ ಮಾಡಿದರೂ ಟಿ.ವಿ. ಹತ್ತಿಕೊಳ್ಳಲೇ ಇಲ್ಲ. ಬಹಳ ಹೊತ್ತಿನ ನಂತರ, ಟಿ.ವಿ. ಸರಿಯಾಗದ್ದು ನೋಡಿ, ಎಲ್ಲರೂ ಪ್ರಯತ್ನ ಕೈಬಿಟ್ಟರು. ಟಿ.ವಿ. ಕೆಟ್ಟುಹೋಗಿತ್ತು!

ಲೀಲಾ ಕೂಡಲೇ ಕಮಲಮ್ಮನವರ ಮನೆಗೆ ಓಡಿದಳು. ಅವಳು ಏದುಸಿರು ಬಿಡುತ್ತಾ ಕಮಲಮ್ಮನವರ ಮುಂದೆ ಟಿ.ವಿ. ಕೆಟ್ಟುಹೋದ ವಿಚಾರ ತಿಳಿಸಿದಳು. ಕಮಲಮ್ಮನವರಿಗೂ ಗಾಬರಿಯಾಯಿತು "ಅಯ್ಯೋ ಇದೇನು! ಟಿ.ವಿ. ತಂದು ಇನ್ನೂ ತಿಂಗಳಾಗಿಲ್ಲ, ಆಗಲೇ ಕೆಟ್ಟುಕೂತಿತೆ? ಹೀಗೇಕಾಯಿತು?!" ಎಂದು ಅವರೂ ಯೋಚಿಸಿದರು. ಅವರು ಕೂಡಲೇ ಲೀಲಳ ಬಳಿ ಗ್ಯಾರಂಟಿ ಕಾರ್ಡನ್ನು ತರಲು ಹೇಳಿದರು. ಲೀಲಾ ಕೂಡಲೇ ತನ್ನ ಮನೆಗೆ ಹೋಗಿ ತಾನು ಜೋಪಾನವಾಗಿರಿಸಿದ ಗ್ಯಾರಂಟಿ ಕಾರ್ಡನ್ನು ತಂದು ಕಮಲಮ್ಮನವರಿಗೆ ಕೊಟ್ಟಳು. ಗ್ಯಾರಂಟಿ ಕಾರ್ಡಿನ ಜೊತೆಗೆ ಟಿ.ವಿ. ಕೊಂಡ ರಸೀದಿಯೂ ಇತ್ತು. ಅದರಲ್ಲಿ ಬರೆದಿದ್ದ ಫೋನ್ ನಂಬರಿಗೆ ಕಮಲಮ್ಮ ಫೋನ್ ಮಾಡಿದರು. ಅಂಗಡಿಯವ ರಿಪೇರಿ ಮಾಡಲು ಮೆಕ್ಯಾನಿಕ್‌ನನ್ನು ಕಳಿಸುವುದಾಗಿ ಭರವಸೆ ಇತ್ತ. ಲೀಲಾ ಸ್ವಲ್ಪ ಸಮಾಧಾನದಿಂದ ಮನೆಗೆ ಹೋದಳು.

ಮಾರನೇದಿನ ಮೆಕ್ಯಾನಿಕ್ ಬಂದವನೇ ಟಿ.ವಿಯನ್ನು ನೋಡಿ, ಸ್ವಲ್ಪ ಹೊತ್ತಿಗೇ ರಿಪೇರಿ ಮಾಡಿಬಿಟ್ಟ! ಲೀಲಾಳಿಗೆ ಪುನಃ ಜೀವ ಬಂದಂತಾಯಿತು. ಅಂತೂ ಟಿ.ವಿ. ಸರಿಯಾಯಿತಲ್ಲ ಎಂದು ಎಲ್ಲರೂ ಸಮಾಧಾನದ ಉಸಿರು ಬಿಟ್ಟರು. ಲೀಲಾ ಪುನಃ ಪುನಃ ಕಮಲಮ್ಮನವರಿಗೆ ವಂದಿಸಿದಳು. ಮಕ್ಕಳು ಮತ್ತೆ ಉತ್ಸಾಹಿತರಾದರು. ಲೀಲಾಳೂ ಸಮಾಧಾನದಿಂದ ಕೆಲಸಕ್ಕೆ ಹೋಗತೊಡಗಿದಳು. ಆದರೆ, ಈ ಖುಷಿ, ಸಮಾಧಾನ ಎಲ್ಲ ಎರಡು ದಿನಕ್ಕೆ ನಿಂತು ಹೋಯಿತು! ಟಿ.ವಿ. ಪುನಃ ಕೆಟ್ಟುಹೋಗಿತ್ತು!

ಲೀಲಾ ಮತ್ತೆ ಕಮಲಮ್ಮನವರಲ್ಲಿಗೆ ಓಡಿದಳು. ಅವರು ಮತ್ತೆ ಅಂಗಡಿಯ ನಂಬರಿಗೆ ಫೋನ್ ಮಾಡಿದರು. ಅಂಗಡಿಯವ ರಿಪೇರಿಗಾಗಿ ಜನ ಕಳಿಸುವುದಾಗಿ ಭರವಸೆ ಇತ್ತ. ಆದರೆ, ಒಂದೇನು, ಎರಡು ಮೂರು ದಿನ ಕಳೆದರೂ

ಮೆಕ್ಯಾನಿಕ್ ಬರಲೇ ಇಲ್ಲ. ಕಮಲಮ್ಮನವರು ಬಾರಿ ಬಾರಿ ಫೋನ್ ಮಾಡಿದರೂ ಅಂಗಡಿಯವ ಏನಾದರೂ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದನೇ ಹೊರತು, ಟಿ.ವಿ. ರಿಪೇರಿಗೆ ಯಾರನ್ನೂ ಕಳಿಸಿ ಕೊಡಲೇ ಇಲ್ಲ.

ಇನ್ನು ಬರೀ ಫೋನಿನಿಂದ ಕೆಲಸವಾಗುವುದಿಲ್ಲವೆಂದು ಕಮಲಮ್ಮನವರಿಗೆ ತಿಳಿಯಿತು. ಅವರು ಲೀಲಳನ್ನು ಕರೆದುಕೊಂಡು, ಗ್ಯಾರಂಟಿ ಕಾರ್ಡನ್ನು ತೆಗೆದುಕೊಂಡು ಅಂಗಡಿಗೇ ಹೋದರು. ಆದರೆ, ಅಂಗಡಿಯವನನ್ನು ಯಾವ ಪರಿಯಲ್ಲಿ ಕೇಳಿಕೊಂಡರೂ, ಅವ ಯಾವ ರೀತಿಯ ತಪ್ಪೊಪ್ಪಿಕೊಳ್ಳಲೂ ತಯಾರಿರಲಿಲ್ಲ. ಅಲ್ಲದೆ, ಇನ್ನು ಮುಂದೆ ಮೆಕ್ಯಾನಿಕ್‌ನನ್ನು ಕಳಿಸುವುದಿಲ್ಲವೆಂದು ಸಾರಾ ಸಗಟು ಹೇಳಿಬಿಟ್ಟ! ಕಮಲಮ್ಮನವರು ಗ್ಯಾರಂಟಿ ಕಾರ್ಡ್ ತೋರಿಸಿದರೂ ಅವ ಕ್ಯಾರೇ ಅನ್ನಲಿಲ್ಲ. ಕಮಲಮ್ಮನವರು ಏನು ಮಾಡಲೂ ತೋಚದೆ, ಕೈ ಚೆಲ್ಲಿ ಕುಳಿತುಬಿಟ್ಟರು. ಲೀಲಾ ಹೋ............. ಎಂದು ಅಳಲು ಸುರು ಮಾಡಿದಳು.

❖ ❖ ❖

ಲೀಲಳ ಮನೆಯಲ್ಲಿ ಹಾಳಾದ ಟಿ.ವಿ. ಹಾಗೆಯೇ ಮೂಲೆಯಲ್ಲಿ ಕೂಡಿತ್ತು. ಮಕ್ಕಳಿಗೆಲ್ಲ ಬಹಳ ನಿರಾಶೆಯಾಗಿತ್ತು. ಲೀಲಾಳ ಉತ್ಸಾಹ ಇಂಗಿಹೋಗಿತ್ತು. ಅವಳಿಗೆ ಯಾವುದರಲ್ಲೂ ಆಸಕ್ತಿ ಇಲ್ಲವಾಗಿತ್ತು. ಆದರೂ ಕೆಲಸ ಮಾಡದಿದ್ದರೆ ಆದೀತೆ? ಹೊಟ್ಟೆ ಹೊರೆಯಬೇಡವೇ? ಈಗ ಟಿ.ವಿಯ ಸಾಲ ಬೇರೆ ತೀರಿಸಬೇಕಲ್ಲ.

ಲೀಲಾ ಒಬ್ಬ ವಕೀಲರ ಮನೆಯನ್ನು ಹೊಸದಾಗಿ ಕೆಲಸಕ್ಕೆ ಹಿಡಿದಿದ್ದಳು. ಅವರು ಆ ಬಡಾವಣೆಗೆ ಹೊಸದಾಗಿ ಬಂದಿದ್ದರು. ವಕೀಲರ ಪತ್ನಿ ರತ್ನಮ್ಮನಿಗೆ

ಲೀಲಳ ಕೆಲಸದ ಬಗ್ಗೆ ಮೆಚ್ಚುಗೆ ಇತ್ತು. ಅವರು ಅವಳನ್ನು ತುಂಬಾ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಅವರ ಆತ್ಮೀಯತೆ ಕಂಡು ಲೀಲ ತನ್ನ ಟಿ.ವಿಯ ಗೋಳಿನ ಕಥೆಯನ್ನು ಅವರಿಗೆ ಹೇಳಿದಳು.

ರತ್ನಮ್ಮನಿಗೆ ಲೀಲಳ ಕಥೆ ಕೇಳಿ ಬೇಸರವಾಯಿತು. "ಪಾಪ! ಸಾಲಸೋಲ ಮಾಡಿ ಒಂದು ಟಿ.ವಿ. ಕೊಂಡರೆ ಅದು ಹೀಗಾಗಬೇಕೇ?" ಎಂದು ಮರುಗಿದರು. ಅವರು ಲೀಲಳಿಗೆ ಹೇಳಿದರು "ನೋಡು ಲೀಲ, ನನ್ನ ಗಂಡ ಈ ಊರಿನಲ್ಲಿ ವಕೀಲರಾಗಿದ್ದಾರೆ. ಅವರು ಈ ವಿಷಯದಲ್ಲಿ ನಿನಗೇನಾದರೂ ಸಲಹೆ ನೀಡಬಹುದು. ಸಾಯಂಕಾಲ ನೀನು ನಿನ್ನೆಲ್ಲಾ ಕೆಲಸ ಮುಗಿಸಿಕೊಂಡು ನಮ್ಮ ಮನೆಗೆ ಬಾ. ಆಗ ನಮ್ಮವರೂ ಮನೆಯಲ್ಲಿರುತ್ತಾರೆ, ಅವರು ಈ ಸಮಸ್ಯೆಗೆ ಏನಾದರೂ ದಾರಿ ತೋರಿಸಬಹುದು."

✣ ✣ ✣

ಲೀಲಾ ಆ ದಿನ ಬೇಗಬೇಗನೆ ಎಲ್ಲಾ ಮನೆಗಳ ಕೆಲಸ ಮುಗಿಸಿ, ಸಂಜೆಯ ಹೊತ್ತಿಗೆ ವಕೀಲರ ಮನೆಗೆ ಬಂದಳು. ಆ ಹೊತ್ತಿಗೆ ವಕೀಲರೂ ಬಂದಿದ್ದರು. ರತ್ನಮ್ಮ ವಕೀಲರಿಗೆ ಕಾಫಿ ಬೆರೆಸಿಕೊಡುತ್ತಿದ್ದರು. ಅವರು ಲೀಲಾಳಿಗೂ ಒಂದು ಲೋಟದಲ್ಲಿ ಕಾಫಿಕೊಟ್ಟು ಕುಳಿತುಕೊಳ್ಳುವಂತೆ ಹೇಳಿದರು. ರತ್ನಮ್ಮನೇ ವಕೀಲರಿಗೆ ಲೀಲಳ ಟಿ.ವಿ.ಯ ಬಗ್ಗೆ ಹೇಳಿದರು.

ರತ್ನಳ ಮಾತು ಕೇಳಿ ವಕೀಲರು ಲೀಲಳನ್ನು "ಲೀಲಾ, ಟಿ.ವಿ ಕೊಂಡು ಎಷ್ಟು ಸಮಯವಾಯಿತು? ಗ್ಯಾರಂಟಿ ಕಾರ್ಡಿನಲ್ಲಿ ಗ್ಯಾರಂಟಿ ಅವಧಿ ಎಷ್ಟಿದೆಯೆಂದು ಗೊತ್ತಿದೆಯೇ ನಿನಗೆ?" ಎಂದು ಕೇಳಿದರು.



ಲೀಲಾ ಅಂಗಡಿಯವನ ಮೋಸದ ಬಗ್ಗೆ ವಕೀಲರಿಗೆ ತಿಳಿಸಿದಳು

ಲೀಲಾ "ಗ್ಯಾರಂಟಿ ಅವಧಿ ಎಲ್ಲ ನನಗೆ ಗೊತ್ತಿಲ್ಲ ಬುದ್ಧಿ! ಟಿ.ವಿ ಖರೀದಿ ಮಾಡಿ ಒಂದು ತಿಂಗಳಾಯಿತು ಅಷ್ಟೆ! ಅಷ್ಟರಲ್ಲೇ ಎರಡು ಬಾರಿ ಕೆಟ್ಟುಹೋಯಿತು! ಎರಡನೇ ಬಾರಿ ಕೆಟ್ಟುಹೋದದ್ದು ಮತ್ತೆ ಸರಿಯಾಗಲೇ ಇಲ್ಲ" ಎಂದು, ತಾನು ಅಂಗಡಿಗೆ ಹೋದದ್ದು ಅಂಗಡಿಯಾತ ತನ್ನ ತಪ್ಪೇ ಇಲ್ಲವೆಂದು ಜಾರಿಕೊಂಡದ್ದನ್ನು ವಿವರಿಸಿದಳು. ಆಗ ವಕೀಲರು "ಲೀಲಾ ನೀನು ಚಿಂತೆ ಮಾಡಬೇಡ. ಇಂತಹ ಠಕ್ಕರಿಗೆ ಸರಿಯಾದ ಶಿಕ್ಷೆ ಇದೆ. ಗ್ರಾಹಕರ ದೂರುಗಳನ್ನು ನಿವಾರಿಸಲಿಕ್ಕಾಗಿಯೇ ಈಗ ಎಲ್ಲ ಜಿಲ್ಲೆಗಳಲ್ಲೂ "ಗ್ರಾಹಕರ ವೇದಿಕೆ"ಗಳನ್ನು ಸರಕಾರ ಸ್ಥಾಪಿಸಿದೆ. ಅಲ್ಲಿ ಹೋಗಿ ನೀನು ದೂರು ಸಲ್ಲಿಸಬಹುದು" ಎಂದರು.

ಲೀಲಳಿಗೆ ಏನೊಂದೂ ತಿಳಿಯಲಿಲ್ಲ"ಬುದ್ಧಿ, ಗ್ರಾಹಕರ ವೇದಿಕೆ ಎಂದರೇನು? ನನಗೊಂದೂ ತಿಳಿಯದು" ಎಂದಳು.

ವಕೀಲರು 'ಗ್ರಾಹಕ'ರೆಂದರೆ ಸಾಮಾನನ್ನು, ಸೇವೆಯನ್ನೂ ಪಡೆದುಕೊಳ್ಳುವವರು. ಅವರು ಈ ರೀತಿ ಪಡೆದುಕೊಂಡ ಸಾಮಾನಿಗಾಗಲಿ, ಸೇವೆಗಾಗಲಿ ಬೆಲೆಯನ್ನು ತೆತ್ತಿರುತ್ತಾರೆ. ಆದರೆ, ಸಾಮಾನನ್ನು ಮಾರುವವರು, ಸೇವೆಯನ್ನು ಕೊಡುವವರು, ಅದಕ್ಕೆ ತಕ್ಕ ಬೆಲೆಯನ್ನು ಕೊಟ್ಟರೂ, ತಮ್ಮ ಗ್ರಾಹಕರಿಗೆ ಮೋಸ ಮಾಡುತ್ತಾರೆ. ಮೋಸ ಹೋಗುವ ಗ್ರಾಹಕರು ತುಂಬಾ ಜನ ಇದ್ದರೂ, ಅವರಿಗೊಂದು ಸಂಘವಿಲ್ಲದ್ದರಿಂದ ಒಬ್ಬಿಬ್ಬರು ಈ ಮೋಸವನ್ನು ವಿರೋಧಿಸಿದರೂ, ತಯಾರಕರು, ಮಾರಾಟಗಾರರಿಗೆ ಯಾವ ರೀತಿಯ ಭಯವೂ ಇರುವುದಿಲ್ಲ. ಹೀಗಾಗಿ ಗ್ರಾಹಕರ ಸಮಸ್ಯೆಗಳನ್ನೂ, ದೂರುಗಳನ್ನು ನಿವಾರಿಸುವುದಕ್ಕಾಗಿಯೇ ನ್ಯಾಯಾಲಯಗಳು ಪ್ರತಿ ಜಿಲ್ಲೆಯಲ್ಲಿಯೂ ತೆರೆದುಕೊಂಡಿವೆ. ಪ್ರತಿಯೊಬ್ಬ

ಗ್ರಾಹಕನೂ ತನ್ನ ದೂರನ್ನು ಇಲ್ಲಿ ನೀಡಿ ತನ್ನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಇದೇ 'ಗ್ರಾಹಕರ ವೇದಿಕೆ' ಎಂದು ಕರೆಸಿಕೊಳ್ಳುತ್ತದೆ." ಎಂದು ಪುಟ್ಟ ಭಾಷಣವನ್ನೇ ಮಾಡಿದರು.

"ಹೌದೇ?!" ಎಂದು ರತ್ನಮ್ಮನವರೂ ಆಶ್ಚರ್ಯದಿಂದ ಕೇಳಿದರು. ವಕೀಲರು "ಸರಿ, ನಿನಗೇ 'ಗ್ರಾಹಕರ ವೇದಿಕೆ'ಯ ಬಗ್ಗೆ ಗೊತ್ತಿಲ್ಲ, ಇನ್ನು ಪಾಪ ಲೀಲಳಿಗೆ ಏನು ಗೊತ್ತಿರುತ್ತದೆ! ಗ್ರಾಹಕರ ವೇದಿಕೆಯನ್ನು ಗ್ರಾಹಕರ ದೂರುಗಳನ್ನು ಕೇಳುವುದಕ್ಕಾಗಿಯೇ ಮತ್ತು ಅವರ ಸಮಸ್ಯೆಗಳನ್ನು ನಿವಾರಿಸುವುದಕ್ಕಾಗಿಯೇ ಸರಕಾರವು ಸ್ಥಾಪಿಸಿದೆ. ಇದನ್ನು ಸಾವಿರದ ಒಂಬೈನೂರಾ ಎಂಬತ್ತಾರರಲ್ಲಿ ಸ್ಥಾಪಿಸಲಾಯಿತು'' ಎಂದರು.

ಲೀಲಾ ಅನುಮಾನದಿಂದ ಕೇಳಿದಳು "ಆದರೆ, ಗ್ರಾಹಕರ ವೇದಿಕೆಯಲ್ಲಿ ಟಿ.ವಿಯಂತಹ ಮಾಮೂಲಿ ವಸ್ತುವಿನ ಬಗ್ಗೆಯೂ ದೂರು ಕೊಡಬಹುದೇ?"

ವಕೀಲರು "ಓಹೋ! ಆಯಾ ಜಿಲ್ಲೆಯ ಗ್ರಾಹಕರ ವೇದಿಕೆಯಲ್ಲಿ ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಯಾವುದೇ ಮಾರಾಟಗಾರರ ವಿರುದ್ಧ ಅಥವಾ ಸೇವೆಯ ವಿರುದ್ಧ ಒಂದು ರೂಪಾಯಿ ಲಕ್ಷ ಒಳಗಿನ ಮೊತ್ತಕ್ಕೆ ದಾವೆ ಹೂಡಬಹುದು" ಎಂದರು.

ರತ್ನಮ್ಮ ಕೇಳಿದರು "ದೂರನ್ನು ಅರ್ಜಿಯ ಮೂಲಕ ಕೊಡಬೇಕೆ? ಹೇಗೆ?''

ವಕೀಲರು "ಹೌದು, ಒಂದು ಬಿಳಿ ಹಾಳೆಯಮೇಲೆ ಅರ್ಜಿ ಬರೆದು, ಅದರಲ್ಲಿ ನಾವು ಯಾರಮೇಲೆ ದೂರು ಕೊಡಬೇಕೆಂದಿದ್ದೇವೆ, ಯಾವ ಕಾರಣಕ್ಕಾಗಿ ದೂರು ಕೊಡಬೇಕೆಂದಿದ್ದೇವೆ ಎಂಬುದನ್ನು ವಿವರವಾಗಿ ಬರೆದು, ವೇದಿಕೆಯ ಅಧ್ಯಕ್ಷರ ಹೆಸರಿಗೆ ಕಳಿಸಬೇಕು. ಜೊತೆಗೆ ನಾವು ಕೊಂಡ ಸಾಮಾನಿನ ರಸೀದಿಯ ಪ್ರತಿಯನ್ನು ಅದರೊಟ್ಟಿಗೆ ಕಳಿಸಬೇಕು. ಅಂದರೆ ನೀನು ಟಿ.ವಿ. ಖರೀದಿ ಮಾಡಿದ ಅಂಗಡಿಯ ಹೆಸರು, ವಿಳಾಸವನ್ನು ಬರೆಯಬೇಕು. ಟಿ.ವಿಯ ರಸೀದಿಯನ್ನು ಪ್ರತಿ ಮಾಡಿಸಿ ಅದರ ಜೊತೆ ಇರಿಸಿ ಕಳುಹಿಸಬೇಕು. ವೇದಿಕೆಗೆ ಈ ಅರ್ಜಿಯ ಎರಡು ಪ್ರತಿಗಳನ್ನು ಕೊಡಬೇಕಾಗುತ್ತದೆ" ಎಂದರು.

ಲೀಲ ಸಂಕೋಚದಿಂದ "ಬುದ್ಧೀ ನೀವೇ ನನ್ನ ಅರ್ಜಿಯನ್ನು ಬರೆದು ಬಿಡಿ, ನನಗೆ ಸರಿಯಾಗಿ ಗೊತ್ತಾಗುವುದಿಲ್ಲ"ಎಂದಳು.

ವಕೀಲರು ಅರ್ಜಿಯ ಎರಡು ಪ್ರತಿಗಳನ್ನು ತಯಾರಿಸಿ, ಕೆಳಗೆ ಲೀಲಳ ಹೆಸರನ್ನು ಬರೆದರು. ಲೀಲ ಅಲ್ಲಿ ತನ್ನ ಹೆಬ್ಬೆಟ್ಟು ಒತ್ತಿದಳು.

ಲೀಲಾ ವಕೀಲರಿಗೆ ವಂದಿಸುತ್ತಾ ಕೇಳಿದಳು "ಬುದ್ಧಿ ಈ 'ಗ್ರಾಹಕರ ವೇದಿಕೆ' ನಮ್ಮ ಧಾರವಾಡದಲ್ಲಿ ಎಲ್ಲಿದೆ?" ಎಂದು ಕೇಳಿದಳು.

ವಕೀಲರು, "ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವ ರಸ್ತೆಯಲ್ಲಿ ಇದೆ. ಊರಿನಿಂದ ಹೊರಗೇ ಇದೆ ಎನ್ನಬಹುದು".

✣ ✣ ✣

ಮಾರನೇ ದಿನ ಲೀಲಾ ಕೋರ್ಟಿನ ಬಳಿ ಹೋದಳು. ಅಲ್ಲಿನ ಸದ್ದುಗದ್ದಲ ನೋಡಿ ಲೀಲಾ ಗಾಬರಿಗೊಂಡಳು. ಎಲ್ಲಿಗೆ ಹೋಗಬೇಕು, ಏನೆಂದು ತಿಳಿಯದೇ ಗೊಂದಲವಾಗಿತ್ತು. ಕೊನೆಗೆ ಧೈರ್ಯಮಾಡಿ ಎದುರು ಬರುತ್ತಿದ್ದ ಒಬ್ಬರು ವಯಸ್ಸಾದವರ ಬಳಿ "ಸಾಹೇಬರೇ, ನಾನು ಇಲ್ಲಿಗೆ ಮೊದಲ ಬಾರಿ ಬರುತ್ತಿದ್ದೇನೆ. ಈ ಜಾಗ ಎಲ್ಲಿದೆ ಎಂದು ತೋರಿಸುತ್ತೀರಾ" ಎಂದು ವಿಳಾಸವಿದ್ದ ಚೀಟಿಯನ್ನು ತೋರಿಸಿದಳು. ಅದಕ್ಕೆ ಅವರೆಂದರು "ನನಗೆ ಅದೊಂದೂ ತಿಳಿಯದಮ್ಮ, ಬೇರೆ ಯಾರನ್ನಾದರೂ ಕೇಳು."

ಲೀಲ ತನಗೆ ತಾನೆ ಶಾಪ ಹಾಕಿಕೊಂಡಳು. ತಾನು ಯಾಕೆ ಮಕ್ಕಳ ಹಟಕ್ಕೆ ಕಟ್ಟುಬಿದ್ದು ಟಿ.ವಿ. ತೆಗೆದುಕೊಳ್ಳಬೇಕಾಗಿತ್ತು. ಈ ರೀತಿ ಬೆಲೆ ಬಾಳುವ ಶೋಕಿ ನಮ್ಮಂತವರಿಗಾಗಿಯೇ? ಈಗ ಎಷ್ಟೊಂದು ತೊಂದರೆಗಳಾಗುತ್ತಿವೆ. ಇದಕ್ಕಿಂತ ಟಿ.ವಿ. ಇಲ್ಲದಿದ್ದಾಗಲೇ ಚೆನ್ನಾಗಿತ್ತು. ಯಾರದಾದರೂ ಮನೆಗೆ ಹೋಗಿ ನೋಡಬಹುದಿತ್ತು ಎಂದೆಲ್ಲಾ ಪೇಚಾಡಿಕೊಂಡಳು.

ಎದುರು ಬರುತ್ತಿದ್ದ ಒಬ್ಬ ಮಧ್ಯವಯಸ್ಸಿನ ವ್ಯಕ್ತಿಯೊಡನೆ ಪುನಃ ಕೇಳಿದಳು "ಅಣ್ಣ, ನಿಮಗೇನಾದರೂ ಈ ಜಾಗ ಎಲ್ಲಿರುವುದೆಂದು ತಿಳಿದಿರುವುದೇ?"

ಚೀಟಿಯನ್ನು ನೋಡಿ ಅವರು "ಅರೆ! ನಾನು ಸಹ ಅಲ್ಲಿಗೇ ಹೋಗುತ್ತಿದ್ದೇನೆ. ನೀನೂ ನನ್ನೊಡನೆ ಬಾ" ಎಂದರು.

ಲೀಲಳಿಗೆ ಸ್ವಲ್ಪ ಧೈರ್ಯಬಂತು. ಅವಳು "ಅಣ್ಣಾವರೇ, ನನ್ನ ಬಳಿ ಈ ಅರ್ಜಿ ಇದೆ. ಅದಕ್ಕಾಗಿಯೇ ಬಂದಿದ್ದೇನೆ ನೀವು ಅದನ್ನು ಕೊಡಿಸಿಬಿಡಿ. ಇದನ್ನು

ಎಲ್ಲಿ ಕೊಡಬೇಕೆಂದೂ ನನಗೆ ಗೊತ್ತಿಲ್ಲ" ಎಂದು ಒಂದೇ ಉಸಿರಿಗೆ ಹೇಳಿದಳು. ಅವರು ದೂರು ಪತ್ರ ಓದಿದರು. "ಹೆದರಬೇಡ, ನಾನು ಸಹ ನಿನ್ನ ಹಾಗೇ ದೂರು ಸಲ್ಲಿಸಲು ಬಂದಿದ್ದೇನೆ" ಎಂದರು.

"ಅಣ್ಣಾವರೇ, ನೀವೂ ಸಹ ಟಿ.ವಿ. ಕೊಂಡುಕೊಂಡಿದ್ದೀರೇನು?" ಲೀಲ ಕೇಳಿದಳು.

"ಇಲ್ಲಿ ನಾನು ಇಸ್ತ್ರಿ ಪೆಟ್ಟಿಗೆ ತೆಗೆದುಕೊಂಡಿದ್ದೆ, ಆರುನೂರು ರೂಗಳದ್ದು! ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಂಗಡಿಯಾತನಿಗೆ ಹಲವು ಬಾರಿ ಹೇಳಿದರೂ ಅವನು ಗಮನ ಕೊಡಲೇ ಇಲ್ಲ. ಇಂತಹ ಜನರ ಮೇಲೆ ದೂರು ಕೊಡಲೇಬೇಕೆಂದು ಯೋಚಿಸಿದೆ. ಗ್ರಾಹಕರ ವೇದಿಕೆಯಲ್ಲಿ ಒಂದು ರೂಪಾಯಿಯಿಂದ ಹಿಡಿದು ಒಂದು ಲಕ್ಷ ರೂಪಾಯಿಯ ತನಕ ದೂರನ್ನು ಸಲ್ಲಿಸಬಹುದು" ಎಂದರು.

ಅಷ್ಟರಲ್ಲಿಯೇ ಬಸ್ಸು ಬಂತು. ಇಬ್ಬರೂ ಬಸ್ ಹತ್ತಿ "ಗ್ರಾಹಕರ ದೂರುಗಳ ನಿವಾರಣಾ ನ್ಯಾಯಾಲಯ"ದ ಮುಂದೆ ಇಳಿದರು. ತನ್ನ ಜೊತೆಗೆ ಬಂದಿದ್ದವರನ್ನು ನೋಡಿ ಲೀಲಳಿಗೆ ತನ್ನಂತೆ ಇವರೂ ಒಬ್ಬರಿದ್ದಾರಲ್ಲ ಎಂದು ಸಮಾಧಾನವಾಗಿತ್ತು. ಒಂದು ಲಕ್ಷ ರೂಪಾಯಿಯ ವರೆಗೂ ಮೋಸವಾಗುತ್ತಲ್ಲ ಎಂದುಕೊಂಡಳು. ಅವಳಿಗೆ ತನ್ನ ಟಿ.ವಿಯ ಮೂರು ಸಾವಿರ ಅಷ್ಟೇನೂ ದೊಡ್ಡ ಮೊತ್ತವಾಗಿ ಕಾಣಲಿಲ್ಲ.

ಅವರು ಆಫೀಸಿನ ಒಳಗೆ ಹೋದರು. ಅಲ್ಲಿ ತುಂಬಾ ಜನರು ಅರ್ಜಿ ಹಿಡಿದುಕೊಂಡು ಸಾಲಾಗಿ ನಿಂತಿದ್ದರು. ಲೀಲಳಿಗೆ ಮತ್ತೂ ಸಮಾಧಾನವಾಯಿತು.



ಗ್ರಾಹಕರ ವೇದಿಕೆಯ ಬಳಿ ಜನರ ಸಾಲು

ಅವರಿಬ್ಬರೂ ಹೋಗಿ ಸಾಲಿನಲ್ಲಿ ಸೇರಿಕೊಂಡರು. ಅಲ್ಲಿ ಒಬ್ಬೊಬ್ಬರದ್ದು ಒಂದೊಂದು ಸಮಸ್ಯೆ. ಎಲ್ಲರಿಗಿಂತ ಸರೋಜಬಾಯಿಯ ಸಮಸ್ಯೆ ಲೀಲಳಿಗೆ ತಮಾಷೆಯಾಗಿ ಕಂಡಿತು! ಅವರು ಒಂದು ಸೀರೆ ಖರೀದಿ ಮಾಡಿದ್ದರು. ಒಗೆದ ಕೂಡಲೇ ಅದರ ಬಣ್ಣ ಕಂಗೆಟ್ಟಿತ್ತು. ಇದನ್ನು ಕೇಳಿ ಲೀಲಳಿಗೆ ತಾನು ದೂರುಕೊಡಲು ಬಂದದ್ದು ಸರಿಯೇ ಆಯಿತು ಎನ್ನಿಸಿತು. ಅಲ್ಲಿಯವರ ಮಾತು ಕೇಳಿ ಅವಳಲ್ಲಿ ಧೈರ್ಯ ಹೆಚ್ಚಿತ್ತು. ತಾನು ಸಾಹಸ ಬಿಡದೆ ಇದ್ದರೆ, ತನಗೆ ನ್ಯಾಯ ದಕ್ಕಿಯೇ ದಕ್ಕುತ್ತದೆ ಎಂದು ಯೋಚಿಸಿದಳು. ಅರ್ಜಿ ಸಲ್ಲಿಸುವಾಗ ದೇವರನ್ನು ನೆನೆದಳು. ಅರ್ಜಿಯನ್ನು ಕೊಡುವಾಗ, ನ್ಯಾಯಾಲಯದ ಕರ್ಮಚಾರಿಯೊಡನೆ "ಸಾಹೇಬರೇ, ಹಣವೇನಾದರೂ ಕೊಡಬೇಕಾಗುತ್ತದಾ ಹೇಗೆ" ಎಂದಳು.

ಅವರು "ಇಲ್ಲ ತಾಯಿ, ಅದಕ್ಕೆ ಯಾವ ಫೀಸೂ ಇಲ್ಲ" ಎಂದರು.

ಅವಳು ಪುನಃ "ವಕೀಲರನ್ನೇನಾದರೂ ನೇಮಿಸಬೇಕೆ?" ಎಂದು ಕೇಳಿದಳು.

ಅದಕ್ಕೆ ಹಿಂದೆ ನಿಂತಿದ್ದ ಒಬ್ಬರು ಹೇಳಿದರು "ವಕೀಲರೂ ಬೇಡ, ಯಾರೂ ಬೇಡ. ಇಲ್ಲಿ ಕೆಲಸ ತುಂಬಾ ಸುಲಭ. ಈಗ ನಾವಂತೂ ಅರ್ಜಿ ಕೊಟ್ಟಾಗಿದೆ. ಇನ್ನೂ ಮುಂದಿನದು ವೇದಿಕೆ ನೋಡಿಕೊಳ್ಳುತ್ತದೆ."

"ಈಗ ವೇದಿಕೆಯೇನು ಮಾಡುತ್ತದೆ" ನಯೀಂ ಮಿಯಾ ಕೇಳಿದರು.

ಹತ್ತಿರದಲ್ಲೇ ನಿಂತಿದ್ದ ಒಬ್ಬ ಹಿರಿಯರು "ಈಗ ಅರ್ಜಿಯ ಒಂದು ಪ್ರತಿ ನಾವು ಪ್ರಾರ್ಥನಾ ಪತ್ರದಲ್ಲಿ ದೂರು ನೀಡಿದ ಅಂಗಡಿಯಾತನಿಗೆ ಹೋಗುತ್ತದೆ. ಮೂವತ್ತು ದಿನಗಳೊಳಗೆ ಅವನಿಗೆ ಉತ್ತರ ಕೊಡುವಂತೆ ಕೇಳಿರುತ್ತಾರೆ.

ಅವನೇನಾದರೂ ತನ್ನ ತಪ್ಪನ್ನು ಒಪ್ಪಿಕೊಂಡರೆ, ಕೋರ್ಟು ಅವನಿಗೆ ಹಾಳಾದ ಮಾಲನ್ನು ಬದಲಿಸಿ, ಸರಿಯಾದ ಮಾಲನ್ನು ಕೊಡುವಂತೆ ಆದೇಶ ಕೊಡುತ್ತದೆ. ಒಂದು ವೇಳೆ ಅವ ಸಾಮಾನನ್ನು ಬದಲಿಸಲು ಒಪ್ಪದಿದ್ದರೆ, ಕೋರ್ಟು ಅವನಿಗೆ ನಾವು ಕೊಟ್ಟ ಹಣವನ್ನು ಹಿಂದಿರುಗಿ ಕೊಡುವಂತೆ ಕೇಳುತ್ತದೆ" ಎಂದು ವಿವರಿಸಿದರು.

ಆಗ ಶಾರದ ಹೇಳಿದರು "ನನಗೇಕೋ ನಾನು ದೂರು ಸಲ್ಲಿಸಿದ ಪಾರ್ಟಿ ತನ್ನ ತಪ್ಪನ್ನು ಒಪ್ಪಿಕೊಳ್ಳುವುದೆಂಬ ನಂಬಿಕೆ ಇಲ್ಲ."

"ಅರೆ, ತನ್ನ ತಪ್ಪನ್ನು ಒಪ್ಪಿಕೊಳ್ಳದೇ ಇದ್ದರೆ, ಕೋರ್ಟು ಅವರ ಹತ್ತಿರ ಸಾಕ್ಷಿ ನೀಡಲು ಕೇಳುತ್ತದೆ. ವಿರೋಧಿ ಪಾರ್ಟಿ ದೂರನ್ನು ಖಂಡಿಸಿದರೆ, ಗ್ರಾಹಕರ ನ್ಯಾಯಾಲಯವು ಕಾರ್ಯಾಚರಣೆ ಮಾಡುತ್ತದೆ" ಎಂದು ಹೇಳಿದರು.

ಲೀಲಾ ಅಲ್ಲೇ ಕುಳಿತಿದ್ದಳು. ಎಷ್ಟೊಂದು ಜನರು ಹಾಳಾದ ಸಾಮಾನನ್ನು ಖರೀದಿಸಿ ತನ್ನ ಹಾಗೆ ತೊಂದರೆಗೊಳಗಾಗಿದ್ದಾರೆ ಎಂದು ಯೋಚಿಸಿದಳು.

"ನಿಮ್ಮ ದೂರು ಸತ್ಯವಾದುದಲ್ಲವೇ ಅಕ್ಕ?" ಎಂದು ಲೀಲ ಶಾರದೆಯನ್ನು ಕೇಳಿದಳು.

"ಅರೆ, ನಿಜವಾಗಿಯೂ ಹೌದು! ಇಲ್ಲವಾದರೆ, ಈ ಆಫೀಸಿಗೆ ಯಾರು ಅಲೆಯುತ್ತಾರೆ?" ಎಂದರು.

"ನನಗೂ ಅದೇ ಕಷ್ಟ. ನನಗೆ ಶಾಂತಿ ಇಲ್ಲದಂತಾಗಿದೆ. ಸಾಲದ ಹಣ ಬೇರೆ, ಎಷ್ಟು ಸಮಯ ಹಿಡಿಯುತ್ತದೋ ತರಲು" ಎಂದಳು.

ಶಾರದೆ ಹೇಳಿದಳು "ಏಕೆ ಹೆದರುತ್ತೀ? ಹೆಚ್ಚು ಸಮಯವೇನೂ ಹಿಡಿಯುವುದಿಲ್ಲ, ಒಂದೆರಡು ತಿಂಗಳಲ್ಲಿ ಕೋರ್ಟು ಎಲ್ಲ ತೀರ್ಮಾನ ಮಾಡುತ್ತದೆ."

ಮತ್ತೊಬ್ಬರೆಂದರು "ಸಾಮಾನ್ಯವಾದ ದೂರುಗಳನ್ನು ಇತ್ಯರ್ಥ ಮಾಡುವುದಕ್ಕೆ ಮೂರು ತಿಂಗಳು ಹಿಡಿಯುತ್ತದೆ. ನಮ್ಮ ಪಕ್ಕದ ಮನೆಯ ನಾಯಕ್ ಅವರ ಮಾಲನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷೆಗೆ ಒಳಪಡಿಸಿದ್ದರಂತೆ. ಅವರಿಗೆ ಹಣ ಹಿಂದಿರುಗಿ ಬರಲು ಆರು ತಿಂಗಳು ಹಿಡಿಯಿತಂತೆ"

ಲೀಲ "ಅಣ್ಣಾವರೆ, ಒಂದು ವೇಳೆ ನ್ಯಾಯಾಲಯ ಬರೆದು ಕಳಿಸಿದರೂ, ನನ್ನ ಟಿ.ವಿ. ಬದಲಾಯಿಸದಿದ್ದರೆ ಏನು ಮಾಡುವುದು?" ಅನುಮಾನದಿಂದ ಕೇಳಿದಳು.



ಗ್ರಾಹಕರಿಗೆ ಮೋಸ ಮಾಡಿದರೆ ಸೆರೆವಾಸ ಖಚಿತ

"ನೋಡಮ್ಮ ನಿನ್ನ ದೂರು ಸರಿಯಾಗಿದ್ದರೆ, ಗ್ರಾಹಕರ ವೇದಿಕೆಯಲ್ಲಿ ಇತ್ಯರ್ಥವಾಗುವ ಹಾಗಿದ್ದರೆ, ಹಾಗೇನಾದರೂ ಬದಲಾಯಿಸದಿದ್ದರೆ, ಅವರನ್ನು ಮೂರು ವರ್ಷವರೆಗೂ ಜೈಲು ಶಿಕ್ಷೆ ವಿಧಿಸುತ್ತಾರೆ. ಅಲ್ಲದೆ, ಎರಡು ಸಾವಿರ ರೂ ದಂಡ ಕೊಡಬೇಕಾಗುತ್ತದೆ" ಎಂದರು.

❖ ❖ ❖

'ಗ್ರಾಹಕರ ನ್ಯಾಯಾಲಯ'ದಿಂದ ವಾಪಾಸು ಬಂದ ಮೇಲೆ ಲೀಲಳಿಗೆ ತುಂಬಾ ಸಮಾಧಾನವಾಯಿತು. ಅವಳು ಕಮಲಮ್ಮನವರಿಗೂ, ರತ್ನಮ್ಮನವರಿಗೂ ಅಲ್ಲಿ ನಡೆದ ಎಲ್ಲ ವಿಷಯಗಳನ್ನು ಉಪ್ಪುಖಾರ ಹಚ್ಚಿ ಹೇಳಿದಳು.

ಸುಮಾರು ಇಪ್ಪತ್ತು ದಿನಗಳಾಯಿತು. ಗ್ರಾಹಕರ ವೇದಿಕೆಯವರಿಂದ ಯಾವ ಸುದ್ದಿಯೂ ಇರಲಿಲ್ಲ. ಕಮಲಮ್ಮನವರು ಲೀಲಳಿಗೆ ಪುನಃ ಒಮ್ಮೆ ಹೋಗಿ ಏನಾಯಿತೆಂದು ವಿಚಾರಿಸಿಕೊಂಡು ಬರುವಂತೆ ಹೇಳಿದರು.

ಸರಿಯೆಂದು ಲೀಲ ಒಂದು ದಿನ ಪುನಃ ನ್ಯಾಯಾಲಯದ ಆಫೀಸಿಗೆ ಹೋದಳು. ಹೋದವಳಿಗೆ ಮೊದಲು ಏನು ಮಾಡಬೇಕೆಂದು ತೋಚಲಿಲ್ಲ. ಅವಳು ಯೋಚಿಸುತ್ತ ನಿಂತದ್ದಂತೆ, ಅವಳಿಗೆ ಅಲ್ಲಿ ವಕೀಲರು ಕಾಣಿಸಿದರು. ಅವಳು ಕೂಡಲೇ ಅವರ ಬಳಿ ಹೋಗಿ, ತಾನು ಅರ್ಜಿ ಸಲ್ಲಿಸಿದ್ದ ಬಗ್ಗೆ ಹೇಳಿದಳು. ವಕೀಲರು ಅವಳಿಗೆ ಸಮಾಧಾನ ಹೇಳಿ, "ಎಲ್ಲ ಸರಿ ಹೋಗುತ್ತದೆ. ನೀನೇನೂ ಹೆದರಬೇಡ" ವೆಂದರು. ಆದರೂ ಲೀಲಳಿಗೆ ಸಮಾಧಾನವಿಲ್ಲ. ಅವಳು ಕೇಳಿದಳು "ಬುದ್ಧಿ ಒಂದು ವೇಳೆ ವಿರೋಧಿ ಪಾರ್ಟಿ ನಮ್ಮ ದೂರನ್ನು ಕೇಳದಿದ್ದರೆ, ಏನು ಮಾಡುವುದು?" ವಕೀಲ

ಸಾಹೇಬರು ಹೇಳಿದರು "ನೋಡು ಲೀಲ, ಎರಡೂ ಪಾರ್ಟಿಗಳೂ ನ್ಯಾಯಾಲಯದಲ್ಲಿ ತಮ್ಮ ಪರವಾಗಿ ಸಾಕ್ಷಿಗಳನ್ನು ತೋರಿಸುತ್ತವೆ. ನ್ಯಾಯಾಲಯ ಎಲ್ಲವನ್ನೂ ಪರಿಶೀಲಿಸಿ ತೀರ್ಪು ಕೊಡುತ್ತದೆ. ಹೆದರಬೇಡ ಲೀಲ, ನ್ಯಾಯಾಲಯ, ನ್ಯಾಯವನ್ನೇ ಒದಗಿಸಿಕೊಡುತ್ತದೆ."

ಲೀಲ ಕೇಳಿದಳು "ಬುದ್ಧಿ, ಒಂದು ವೇಳೆ ನ್ಯಾಯಾಲಯದ ತೀರ್ಪು ಅವರಿಗೆ ಒಪ್ಪಿಗೆಯಾಗದಿದ್ದರೆ.........?"

ವಕೀಲ ಸಾಹೇಬರು ನಕ್ಕು ಬಿಟ್ಟರು. ಮತ್ತೆ ಹೇಳಿದರು "ಹಾಗಾದರೆ, ಮೂವತ್ತು ದಿನಗಳೊಳಗೆ ಅವರು 'ಗ್ರಾಹಕರ ವೇದಿಕೆ' ವಿರುದ್ಧ ರಾಜ್ಯ ಆಯೋಗದಲ್ಲಿ ಅಪೀಲು ಕೊಡಬಹುದು, ಹಾಗೆಯೇ ಆಯೋಗದ ವಿರುದ್ಧ ರಾಷ್ಟ್ರೀಯ ಆಯೋಗದಲ್ಲಿ ಅಪೀಲು ಮಾಡಬಹುದು. ಇವ್ಯಾವುದಕ್ಕೂ, ಯಾವ ಫೀಸೂ ಇರುವುದಿಲ್ಲ."

ಇವರಿಬ್ಬರ ಮಾತನ್ನು ಶ್ರದ್ಧೆಯಿಂದ ಕೇಳುತ್ತಾ ಕುಳಿತಿದ್ದ ಒಬ್ಬರು ವಕೀಲರನ್ನು ಕೇಳಿದರು "ವಕೀಲ ಸಾಹೇಬರೆ, ರಾಷ್ಟ್ರೀಯ ಆಯೋಗ ಮತ್ತು ರಾಜ್ಯ ಆಯೋಗದ ಬಗ್ಗೆ ಸ್ವಲ್ಪ ವಿವರವಾಗಿ ಹೇಳುತ್ತೀರಾ?"

"ರಾಜ್ಯ ಆಯೋಗ ರಾಜ್ಯ ಮಟ್ಟದ ದೂರುಗಳಿಗಾಗಿ ಇದೆ. ಒಂದು ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತಕ್ಕಾಗಿ ದೂರನ್ನು, "ಗ್ರಾಹಕರ ವೇದಿಕೆ"ಗೆ ಸಲ್ಲಿಸದೇ, ಸೀದಾ ಇಲ್ಲಿಗೇ ಸಲ್ಲಿಸಬಹುದು. ರಾಷ್ಟ್ರೀಯ ಆಯೋಗ ರಾಷ್ಟ್ರಮಟ್ಟದ ದೂರುಗಳದ್ದು, ಹತ್ತು ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತಕ್ಕಾಗಿ ದೂರನ್ನು

ಗ್ರಾಹಕರ ವೇದಿಕೆಗೆ ಸಲ್ಲಿಸದೇ, ಸೀದಾ ಅಲ್ಲಿಗೇ ಸಲ್ಲಿಸಬಹುದು. ಗ್ರಾಹಕರ ವೇದಿಕೆಯ ವಿರುದ್ಧ ರಾಜ್ಯ ಆಯೋಗದಲ್ಲೂ, ರಾಜ್ಯ ಆಯೋಗದ ವಿರುದ್ಧ, ರಾಷ್ಟ್ರೀಯ ಆಯೋಗದಲ್ಲೂ, ತೀರ್ಪಿನ ವಿರುದ್ಧ ಅದು ಬಂದ ಒಂದು ತಿಂಗಳೊಳಗಾಗಿ ಅಪೀಲು ಕೊಡಬಹುದು" ಎಂದು ವಿವರಿಸಿದರು.

ವಕೀಲ ಸಾಹೇಬರ ಮಾತು ಕೇಳಿ ಲೀಲಳಿಗೆ ಬಹಳಷ್ಟು ಸಮಾಧಾನವಾಯ್ತು. ಅವಳು ಮನೆಗೆ ಮರಳಿದಳು.

❖ ❖ ❖

ಕೊನೆಗೂ, "ಗ್ರಾಹಕರ ವೇದಿಕೆ" ಲೀಲಾಳಿಗೆ ನ್ಯಾಯ ಒದಗಿಸಿತು. ಲೀಲಳ ಮನೆಗೆ ಅಂಗಡಿಯವನು ಬೇರೆ ಟಿ.ವಿಯನ್ನು ಬದಲಾಯಿಸಿ ಕೊಟ್ಟು ಹೊದ. ಲೀಲಳಿಗೆ ಹೋದ ಜೀವ ಬಂದಂತಾಯಿತು. ಆದರೂ ಅವಳಿಗೆ ಒಂದು ಸಂಶಯ, ಈ ಟಿ.ವಿಯೂ ಕೆಟ್ಟುಹೊದರೆ! ಹಾಗೆಯೇ ಕಮಲಮ್ಮನವರಲ್ಲಿಯೂ ಕೇಳಿದಳು. ಅವರೆಂದರು, "ನೋಡು ಲೀಲ, ಈಗ ನಮಗೆ ದಾರಿ ತೋರುತ್ತಿದೆ. ಈ ರೀತಿಯ ಮೋಸಗಾರರನ್ನು ಹೇಗೆ ನಿಭಾಯಿಸಬೇಕೆಂದು ಗೊತ್ತಾಗಿದೆ. ಇನ್ನು ನಾವು ಯಾವುದಕ್ಕೂ ಹೆದರಬೇಕಾಗಿಲ್ಲ."

ಲೀಲಳಿಗೂ ಅದು ಸರಿ ಎನ್ನಿಸಿತು, "ಹೌದು, ಅಮ್ಮಾ ನಾನು 'ಗ್ರಾಹಕರ ವೇದಿಕೆ'ಯ ಕಚೇರಿಗೆ ಹೋದಾಗ ನನಗೆ ತುಂಬಾ ವಿಷಯ ತಿಳಿಯಿತು. ನಾವು ತಿನ್ನುವ, ಉಣ್ಣುವ ವಸ್ತುಗಳಲ್ಲಿ ಏನಾದರೂ ಕಲಬೆರಕೆಯಾಗಿದ್ದರೂ, ಔಷಧ, ಮದ್ದುಗಳಲ್ಲಿ ನಕಲಿ ಮಾಡಿದ್ದರೂ, ನಾವು ಆದರ ವಿರುದ್ಧ "ಗ್ರಾಹಕರ ವೇದಿಕೆ"ಯಲ್ಲಿ ದೂರು

ಕೊಡಬಹುದಂತೆ. ನಮ್ಮ ಬಳಿ ಆ ವಸ್ತುವಿನ ರಸೀದಿ ಇಲ್ಲದಿದ್ದರೂ ಪರವಾಗಿಲ್ಲವಂತೆ. ನಾವು ಕುಡಿಯುವ, ತಿನ್ನುವ ವಸ್ತುಗಳು ನಮ್ಮ ದೇಹಕ್ಕೆ ಹಾನಿಕಾರವಾಗಿದ್ದರೆ, ಅವುಗಳ ವಿರುದ್ಧ ದೂರು ಕೊಡುವ ಅಧಿಕಾರ ನಮಗಿದೆ ಎಂದು ಅಲ್ಲಿ ಬಂದಿದ್ದವರೊಬ್ಬರು ಹೇಳಿದರು" ಎಂದು ಹೇಳಿದಳು.

ಕಮಲಮ್ಮನವರು ಹೇಳಿದರು "ಹೌದು ಲೀಲ. ಈಗ ನೀನು ತುಂಬಾ ಜಾಣೆಯಾಗಿದ್ದೀಯೇ. ಎಲ್ಲ ವಿಷಯಗಳನ್ನು ನೀನು ಈಗ ತಿಳಿದುಕೊಂಡಿದ್ದೀ. ಈ ರೀತಿಯ ಕಲಬೆರಕೆಯ ಮಾಲನ್ನು ಮಾರುವವರ ಸಾಮಾನನ್ನು ನಾವು ಸಹ ಆದಷ್ಟು ಪರೀಕ್ಷಿಸಿಯೇ ಕೊಳ್ಳಬೇಕು. ಹಾಲು, ಅಕ್ಕಿ, ಬೆಳೆ ಮುಂತಾದವುಗಳನ್ನು ಸ್ವಲ್ಪ ಗಮನಿಸಿದರೆ, ಅದು ಕಲಬೆರಕೆಯಾಗಿದ್ದೇ, ಅಲ್ಲವೇ ತಿಳಿದು ಬಿಡುತ್ತದೆ. ನಾವು ಖರೀದಿ ಮಾಡುವ ಬೇರೆ ವಸ್ತುಗಳನ್ನು ನೋಡಿ, ಪರೀಕ್ಷಿಸಿ ತೆಗೆದುಕೊಳ್ಳಬೇಕು. ಅವು ಅಸಲಿಯೋ, ನಕಲಿಯೋ ಎಂದು ನೋಡಬೇಕು. ಯಾವಾಗಲೂ ಕೊಂಡ ಸಾಮಾನಿಗೆ ರಸೀದಿಯನ್ನು ಪಡೆದುಕೊಳ್ಳಬೇಕು." ಲೀಲ ಹೇಳಿದಳು "ಅಲ್ಲಿ ಸರೋಜಬಾಯಿ ಎಂಬವರೊಬ್ಬರು ಬಂದಿದ್ದರು. ಅವರು ಒಂದು ಸೀರೆ ತೆಗೆದುಕೊಂಡಿದ್ದರಂತೆ. ಅದು ಒಮ್ಮೆ ಒಗೆದ ಕೂಡಲೇ ಬಣ್ಣ ಬಿಟ್ಟಿತಂತೆ. ಸೀರೆಯ ಬಣ್ಣವೇ ಮಸುಕಾಗಿ ಹೋಯಿತಂತೆ. ಅದಕ್ಕಾಗಿ ದೂರು ಸಲ್ಲಿಸಲು ಬಂದಿದ್ದರು. ಅವರು, ಮೋಸಗಾರರಿಗೆ ಸರಿಯಾದ ಶಿಕ್ಷೆ ಕೊಡಬೇಕು ಎಂದು ಹೇಳುತ್ತಿದ್ದರು."

"ಅವರು ಹೇಳಿದ್ದು ಸರಿ. ಮೋಸಗಾರರಿಗೆ ಶಿಕ್ಷೆ ವಿಧಿಸಲೇಬೇಕು. ನೀನು ಇನ್ನೂ ಒಂದು ಮಾತು ತಿಳಿದುಕೊ. ಓದುಬರಹ ಬರದಿದ್ದರೆ, ಈ ರೀತಿ ವ್ಯವಸ್ಥೆಗಳ



ಮರಳಿ ಟಿ.ವಿ. ಪಡೆದ ಲೀಲಾಳಿಗೆ ಕಮಲಮ್ಮ ಗ್ರಾಹಕರ ವೇದಿಕೆ ಬಗ್ಗೆ ವಿವರಿಸಿದರು

ಬಗ್ಗೆ ಅರಿವು ಬರುವುದೇ ಇಲ್ಲ. ಅಸಲಿ ನಕಲಿಯ ವ್ಯತ್ಯಾಸವೂ ಗೊತ್ತಾಗುವುದಿಲ್ಲ. ಓದು, ಬರಹದಿಂದ ಎಲ್ಲವನ್ನೂ ತಿಳಿದುಕೊಳ್ಳಬಹುದು. ಆದರೆ ತಿಳಿದುಕೊಂಡರಷ್ಟೇ ಸಾಲದು, ಅದನ್ನು ಉಪಯೋಗಿಸಿಕೊಳ್ಳಲೂ ಬೇಕು. ಆಗ ಮಾತ್ರ ಈ ಸೌಲಭ್ಯಗಳಿಗೆ ಒಂದು ಅರ್ಥ ಬರುತ್ತದೆ. ಅವು ಫಲಕಾರಿಯಾಗುತ್ತವೆ" ಕಮಲಮ್ಮನವರು ಹೇಳಿದರು.

"ಹೌದು ಅಮ್ಮ, ಈಗ ನನಗೆಲ್ಲ ತಿಳಿಯುತ್ತಿದೆ. ಈಗ ನನಗೆ ಭಯವೇ ಇಲ್ಲ. ಈಗ ಯಾವುದೇ ಕಷ್ಟ ಬಂದರೂ ಅದನ್ನು ಎದುರಿಸಿ ನಿಲ್ಲುವ ಧೈರ್ಯ ಬಂದಿದೆ ನನಗೆ" ಲೀಲಳ ಆತ್ಮವಿಶ್ವಾಸ ಹೇಳುತ್ತಿತ್ತು. ದಾರಿ ಸುಗಮವಾಗಿತ್ತು.

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಆದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು